**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 03-09-2022 ರಂದು ಹೊಸ ವಾರ್ಡ್ ಸಂಖ್ಯೆ:111 (ಹಗದೂರು)ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಹಾಗೂ ನೊಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:**

**<u>ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ</u>**

1. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.
2. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
3. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
4. ಹಗದೂರು ವಾರ್ಡಿನ ಶಕ್ತಿ ಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

**ಹೊಸ ವಾರ್ಡ್ ರಚನೆಯಾದ ಹಿನ್ನಲೆಯಲ್ಲಿ ವೈಟ್‌ಫೀಲ್ಡ್ ವಾರ್ಡ್‌ನ ವಿಷಯಗಳು ಮತ್ತು ದೂರುಗಳ ಬಗ್ಗೆ ಮತ್ತು ಕೈಗೊಳ್ಳಬೇಕಾಗಿರುವ ಕ್ರಮದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.**

**ಅ) ಬಿ.ಬಿ.ಎಂ.ಪಿ -ವಾರ್ಡ್ ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ನೀರಿನ ಸಮಸ್ಯೆ ಬಗ್ಗೆ ಚರ್ಚೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ವಾಟರ್ ಮ್ಯಾನ್‌ಗಳಿಗೆ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
2. ನಾಗೊಂಡನಹಳ್ಳಿ ಅಂಗನವಾಡಿ ಕಟ್ಟಡ ನಿರ್ಮಾಣದ ಬಗ್ಗೆ ಮಾಹಿತಿ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.
3. ನಾಗೊಂಡನಹಳ್ಳಿ ಸಮುದಾಯ ಭವನ ಪೂರ್ಣಗೊಳ್ಳದಿರುವ ಬಗ್ಗೆ ಮಾಹಿತಿ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.
4. ಕೈತೋಟ ಚನ್ನಸಂದ್ರ ರಸ್ತೆಯಲ್ಲಿ ವೈಜ್ಞಾನಿಕ ರಸ್ತೆ ಉಬ್ಬರಗಳನ್ನು ಅಳವಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಟ್ರಾಫೀಕ್ ಇಂಜಿನಿಯರಿಂಗ್ ಸೆಲ್ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಪತ್ರ ಬರೆಯುವುದಾಗಿ ತಿಳಿಸಿದರು.
5. ನಾಗೊಂಡನಹಳ್ಳಿ -ಹೊಳೆ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂಬರುವ ಅನುದಾನದಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.
6. ನಾಗೊಂಡನಹಳ್ಳಿ ಕಾಲೋನಿ ರಸ್ತೆಯಗಳ ಚರಂಡಿಗಳ ಮೇಲೆ ಉಳಿಕೆ(ಬೇಕಾಗಿರುವ ಕಡೆ) ಸ್ಲಾಬ್‌ಗಳನ್ನು ಅಳವಡಿಸುವುದು.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಕಾಮಗಾರಿಯನ್ನು ಮಾಡಿಸುವುದಾಗಿ ತಿಳಿಸಿದರು.

Scanned with OKEN Scanner

7. ನಾಗೊಂಡನಹಳ್ಳಿ ಗುಂಡು ತೋಪು, ಸ್ಮಶಾನ ಮತ್ತು ಪಾರ್ಕ್‌ನ ಸರ್ವೆ ಮಾಡಿಸಿ, ಸ್ವಚ್ಛ ಮಾಡಿಸುವ ಬಗ್ಗೆ.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಸರ್ವೆ ಮಾಡಿಸಲು ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

8. ನೀರು ಸರಬರಾಜುದಾರರನ್ನು ನೇಮಿಸುವ / ನಿಯೋಜಿಸುವ ಬಗ್ಗೆ.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಮೇಲಾಧಿಕಾರಿಗಳ ಗಮನಕ್ಕೆ ತಂದು, ನೀರು ಸರಬರಾಜುದಾರರನ್ನು ನೇಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

9. ಕೆ.ಎಸ್.ವಿ.ಕೆ. / ಎ.ಬಿ.ವಿ.ಕೆ ಶಾಲೆಗಳ ರಸ್ತೆಯಗಳ ಚರಂಡಿಗಳ ಮೇಲೆ ಉಳಿಕೆ(ಬೇಕಾಗಿರುವ ಕಡೆ) ಸ್ಲಾಬ್‌ಗಳನ್ನು ಅಳವಡಿಸುವುದು.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಕಾಮಗಾರಿಯನ್ನು ಮಾಡಿಸುವುದಾಗಿ ತಿಳಿಸಿದರು.

10. ಇಮ್ಮಡಿಹಳ್ಳಿ ರಸ್ತೆಯಗಳ ಚರಂಡಿಗಳ ಮೇಲೆ ಉಳಿಕೆ(ಬೇಕಾಗಿರುವ ಕಡೆ) ಸ್ಲಾಬ್‌ಗಳನ್ನು ಅಳವಡಿಸುವುದು.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಕಾಮಗಾರಿಯನ್ನು ಮಾಡಿಸುವುದಾಗಿ ತಿಳಿಸಿದರು.

11. ಇಮ್ಮಡಿಹಳ್ಳಿ ಮತ್ತು ಹಗದೂರು ಎಲ್ಲಾ ರಸ್ತೆಗಳ ಚರಂಡಿಗಳಲ್ಲಿನ ಹೂಳನ್ನು ತೆಗೆದಯುವುದು.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಹೂಳೇತ್ತುವ ಕಾಮಗಾರಿ ಮಾಡಿಸಲಾಗುವುದು ಎಂದು ತಿಳಿಸಿದರು.

**ಆ) ಬಿ.ಬಡ್ಲ್ಯೂ.ಎಸ್.ಎಸ್.ಬಿ - ಮಟ್ಟದ ಸಮಸ್ಯೆಗಳ ಚರ್ಚೆ.**

1. ಅನ್ನಪೂಣೇಶ್ವರಿ ದೇವಸ್ಥಾನದ ರಸ್ತೆಯ ಒಳಚರಂಡಿ ಛೇಂಬರ್ಸ್‌ಗಳನ್ನು ಎತ್ತರಿಸುವ ಬಗ್ಗೆ.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಬಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2. ವೈಟ್‌ಬ್ರೀಸ್ ಅಪಾರ್ಟ್‌ಮೆಂಟ್‌ನಿಂದ ಎಸ್.ಟಿ.ಪಿ ನೀರನ್ನು ರಸ್ತೆ ಬದಿಯ ಚರಂಡಿಗೆ ಬಿಡುತ್ತಿರುವ ಬಗ್ಗೆ.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಬಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಇ) ರಸ್ತೆ ಮೂಲಭೂತ ಸೌಕರ್ಯ ವಿಭಾಗ - ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, (ಮೇಜರ್ ರೋಡ್ಸ್) ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2. ನಾಗೊಂಡನಹಳ್ಳಿ-ವಿಜಯನಗರ ರಸ್ತೆಯ ಎರಡೂ ಕಡೆ ಚರಂಡಿ ನಿರ್ಮಾಣ ಮಾಡುವ ಬಗ್ಗೆ.

- ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, (ಮೇಜರ್ ರೋಡ್ಸ್) ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

Scanned with OKEN Scanner

3. ನಾಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿ ಶ್ರೀ.ಮಹೇಶ್ ರವರ ಟಿ.ಡಿ.ಆರ್ ಹಣ ಪಾವತಿಸುವ ಬಗ್ಗೆ.

- ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು ರವರು ಟಿ.ಡಿ.ಆರ್ ಶಾಖೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಈ) ಆರೋಗ್ಯ ಇಲಾಖೆ - ಮಟ್ಟದ ಸಮಸ್ಯೆಗಳ ಚರ್ಚೆ.**

1. ಪೌರ ಕಾರ್ಮಿಕರು ಸರಿಯಾಗಿ ಕೆಲಸ ಮಾಡದಿರುವ ಬಗ್ಗೆ.
   - ಸದರಿ ವಿಷಯಕ್ಕೆ ಆರೋಗ್ಯ ಪರಿವೀಕ್ಷಕರು, ಪೌರ ಕಾರ್ಮಿಕರ ಕೆಲಸ ನಿರ್ವಹಿಸುವುದನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
2. ಹಗದೂರು ಅಂಗನವಾಡಿ ಹತ್ತಿರ ಸ್ವಚ್ಛ ಮಾಡುವ ಬಗ್ಗೆ.
   - ಸದರಿ ವಿಷಯಕ್ಕೆ ಆರೋಗ್ಯ ಪರಿವೀಕ್ಷಕರು, ಸ್ಥಳಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಉ) ಬೃಹತ್ ನೀರುಗಾಲುವೆ ಇಲಾಖೆ - ಮಟ್ಟದ ಸಮಸ್ಯೆಗಳ ಚರ್ಚೆ.**

1. ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.
   - ಸದರಿ ವಿಷಯಕ್ಕೆ ನೊಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.
2. ದಕ್ಷಿಣ ಪಿನಾಕಿನಿ ನದಿಯ ರಾಜಕಾಲುವೆಯನ್ನು ಡಿಸಿಲ್ಟ್ ಮಾಡುವ ಬಗ್ಗೆ.
   - ಸದರಿ ವಿಷಯಕ್ಕೆ ನೊಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.
3. ಪ್ರೆಸ್ಟೀಜ್ ಓಜೋನ್ ಹಿಂಭಾಗದ ರಾಜಕಾಲುವೆಯನ್ನು ಡಿಸಿಲ್ಟ್ ಮಾಡುವ ಬಗ್ಗೆ.
   - ಸದರಿ ವಿಷಯಕ್ಕೆ ನೊಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ**

**ಸಹಾಯಕ ಅಭಿಯಂತರರು**

**ವಾರ್ಡ್ ನಂ: 111**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned with OKEN Scanner